ದಿನಾಂಕಃ 30.12.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಾದ ಶ್ರೀ. ಎಂ ಸಿ ಎಸ್ ವಕೀಲರಿಂದ

ಅಪಘಾತ ದಿಃ30.04.2017 ರಂದು ಸಮಯ ಸಂಜೆ 5 ಗಂಟೆಗೆ ಆಗಿರುತ್ತದೆ. ನನ್ನ ನಿರ್ಲಕ್ಷತನದಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ನಿಲರ್ಕ್ಷತನದಿಂದ ಅಪಘಾತ ಆಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲನಾ ಪರವಾನಿಗೆಯನ್ನು ಹೊಂದಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲನಾ ಪರವಾನಿಗೆಯನ್ನು ಹೊಂದಿಲ್ಲ ಎಂದು ನಾನು ಹೇಳಿರುವುದು ನನ್ನ ತಪ್ಪು ತಿಳಿವಳಿಕೆ ಎಂದರೆ ಸರಿಯಲ್ಲ. ಅಪಘಾತ ಆದ ಸಂದರ್ಬದಲ್ಲಿ 1 ನೇ ಎದುರುದಾರರ ವಾಹನವು ಸೂಕ್ತ ಪರ್ಮಿಟ್ ಅನ್ನು ಹೊಂದಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. 3 ನೇ ಎದುರುದಾರರಲ್ಲಿ ಸೂಕ್ತ ವಿಮೆಯನ್ನು ಹೊಂದಿದ್ದರು ಎಂದರೆ ಸರಿ. ನಿಪಿ–7 ಮತ್ತು 8 ಈ ಪ್ರಕರಣಕ್ಕೆ ಸಂಬಂದಪಟ್ಟವಲ್ಲ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರವನ್ನು 1 ಮತ್ತು 2 ನೇ ಎದುರುದಾರರು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 3 ನೇ ಎದುರುದಾರರ ವಿಮಾ ಪರಿಹಾರವನ್ನು ನೀಡಬೇಕು ಎಂದರೆ ಸರಿ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಸಾಗರ